EE(IEC)
12/6

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 198 ವಾರ್ಡ್‌ಗಳಲ್ಲಿ ತಲಾ ಒಂದರಂತೆ "ಇಂದಿರಾ ಕ್ಯಾಂಟೀನ್" ವಿನೂತನ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ನಿರ್ಮಾಣ ಕಾಮಗಾರಿಯನ್ನು ಮೆ॥ ಕೆ.ಇ.ಎಫ್. ಸಂಸ್ಥೆಯಿಂದ ಕೈಗೆತ್ತಿಕೊಳ್ಳಲು ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ದಿನಾಂಕ: 25-04-2017 ಮತ್ತು 19-05-2017ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯ ಬಗ್ಗೆ ನಡೆದ ಸಭೆಯ ನಡವಳಿಗಳು.
2. ಸರ್ಕಾರದ ಆದೇಶ ಸಂಖ್ಯೆ: ನಅಇ 281 ಎಂಎನ್‌ಯು 2017, ದಿನಾಂಕ 04-05-2017.
3. ದಿನಾಂಕ: 17-05-2017ರಂದು ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯ ಬಗ್ಗೆ ನಡೆದ ಸಭೆಯ ನಡವಳಿ.
4. ಸರ್ಕಾರದ ಆದೇಶ ಸಂಖ್ಯೆ: ನಅಇ 319 ಎಂಎನ್‌ಯು 2017 (ಭಾಗ-2), ದಿನಾಂಕ 24-05-2017.
5. ದಿನಾಂಕ: 26-05-2017 ಮತ್ತು 29-05-2017 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯ ಬಗ್ಗೆ ನಡೆದ ಸಭೆಯ ನಡವಳಿಗಳು.
6. ಸರ್ಕಾರದ ಆದೇಶ ಸಂಖ್ಯೆ: ನಅಇ 319 ಎಂಎನ್‌ಯು 2017 (ಭಾಗ-2), ದಿನಾಂಕ 27-05-2017.
7. ದಿನಾಂಕ: 27-05-2017ರಂದು ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಅಧ್ಯಕ್ಷತೆಯಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯ ಬಗ್ಗೆ ನಡೆದ ಸಭೆಯ ನಡವಳಿ.
8. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಬೆಮಪಾ/ಆಯುಕ್ತರು/ಪಿಆರ್/36/2017-18, ದಿನಾಂಕ: 30-05-2017.

* * * * *

ಪ್ರಸ್ತಾವನೆ:

ನಗರ ಪ್ರದೇಶದ ಜನಸಾಮಾನ್ಯರಿಗೆ ಊಟ ಮತ್ತು ಉಪಹಾರವನ್ನು ಕೈಗೆಟುಕುವ ದರದಲ್ಲಿ ಒದಗಿಸಲು ಮಾನ್ಯ ಮುಖ್ಯಮಂತ್ರಿಗಳು "ಇಂದಿರಾ ಕ್ಯಾಂಟೀನ್" (ನಮ್ಮ ಕ್ಯಾಂಟೀನ್) ಎಂಬ ವಿನೂತನ ಯೋಜನೆಯನ್ನು 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ್ದು, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬೃಹತ್ ಬೆಂಗಳೂರು

..2..

Scanned by CamScanner

ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ತಲಾ ಒಂದರಂತೆ ತೆರೆಯಲು ಹಾಗೂ ತಲಾ 28 ವಿಧಾನ ಸಭಾ ಕ್ಷೇತ್ರದಲ್ಲಿ 01 ಇಂದಿರಾ ಕ್ಯಾಂಟೀನ್ ಅಡಿಗೆ ಮನೆಯನ್ನು ನಿರ್ಮಿಸಲು ಹಾಗೂ ಸದರಿ ಕ್ಯಾಂಟೀನ್‌ನಲ್ಲಿ ಬೆಳಗಿನ ಉಪಹಾರವನ್ನು ರೂ.5/- ಗಳಿಗೆ, ಮಧ್ಯಾಹ್ನ ಹಾಗೂ ರಾತ್ರಿ ಊಟವನ್ನು ರೂ.10/- ಗಳಂತೆ ಒದಗಿಸುವ ಉದ್ದೇಶಕ್ಕಾಗಿ ರೂ.100.00 ಕೋಟಿಗಳನ್ನು ಮೀಸಲಿಡಲಾಗಿರುತ್ತದೆ.

ಮೇಲೆ (1)ರಲ್ಲಿ ಓದಲಾದ ದಿನಾಂಕ 25-04-2017ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯನ್ನು ದಿನಾಂಕ 15-08-2017 ರಂದು ಜನಸಾಮಾನ್ಯರಿಗೆ ಅರ್ಪಿಸುವ ಸಲುವಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರೀ ಕಾಸ್ಟ್ ತಂತ್ರಜ್ಞಾನವನ್ನು ಅಳವಡಿಸಿಕೊಂಡು, 198 ಕ್ಯಾಂಟೀನ್ ಹಾಗೂ 28 ಆಡಿಗೆ ಮನೆ ನಿರ್ಮಿಸುವುದು ಹಾಗೂ ಪ್ರೀ ಕಾಸ್ಟ್ ತಂತ್ರಜ್ಞಾನ ಬಳಸಿಕೊಳ್ಳುವುದರ ಜೊತೆಗೆ ಕಾಲಾವಧಿಯು ಕಡಿಮೆಯಿರುವ ಹಿನ್ನೆಲೆಯಲ್ಲಿ 4 (ಜಿ)ಅನ್ವಯ ವಿನಾಯಿತಿ ನೀಡಿ ನಿರ್ಮಿಸುವುದು ಸೂಕ್ತವೆಂದು ತೀರ್ಮಾನಿಸಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯನ್ನು ನಿಗಧಿತ ಅವಧಿಯಲ್ಲಿ ಪ್ರಾರಂಭಿಸಲು ಪೂರ್ವ ಸಿದ್ಧತೆ ಹಾಗೂ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ ಸಾಧಿಸಲು ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರ ಅಧ್ಯಕ್ಷೆಯಲ್ಲಿ ಒಂದು ಸಮಿತಿಯನ್ನು ರಚಿಸಿ, ದಿನಾಂಕ 04-05-2017ರಂದು ಆದೇಶಿಸಲಾಗಿರುತ್ತದೆ. ಅದರಂತೆ ಮೇಲೆ (3)ರಲ್ಲಿ ಓದಲಾದ ನಡವಳಿಯಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯನ್ನು ನಡೆಸುವ ಬಗ್ಗೆ ಇಲಾಖೆಯ ಮತ್ತು ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ, ಇಂದಿರಾ ಕ್ಯಾಂಟೀನ್ ಯೋಜಯನ್ನು ಯಾವ ರೀತಿಯಲ್ಲಿ ನಿರ್ಮಿಸಬೇಕು ಹಾಗೂ ಸದರಿ ಕ್ಯಾಂಟೀನ್‌ನಲ್ಲಿ ಜನ ಸಾಮನ್ಯರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ತೀರ್ಮಾನಿಸಲಾಯಿತು ಹಾಗೂ ಈಗಾಗಲೇ ಯೋಜನೆಗೆ ರೂ. 100.00 ಕೋಟಿ ಅನುದಾನವನ್ನು ಒದಗಿಸಿದ್ದು, ಈ ಯೋಜನೆಯನ್ನು ಜಾರಿಗೊಳಿಸಿದ್ದಲ್ಲಿ ಹೆಚ್ಚಿನ ಮೊತ್ತದ ಹಣಕಾಸಿನ ಅವಶ್ಯಕತೆಯಿದ್ದು, ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲು ತೀರ್ಮಾನಿಸಲಾಯಿತು.

ಮೇಲೆ (1)ರಲ್ಲಿ ಓದಲಾದ ದಿನಾಂಕ 19-05-2017ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯ ಬಗ್ಗೆ ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಹಾಗೂ ಪೂಜ್ಯ ಮಹಾಪೌರರು, ಬಿ.ಬಿ.ಎಂ.ಪಿ. ಇವರು ಸೇರಿದಂತೆ ಇತರೆ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ, 'ಪ್ರೀ ಕಾಸ್ಟ್' ಪದ್ಧತಿಯ ಮೂಲಕ ಪ್ರತಿ ವಾರ್ಡಿಗೆ ಒಂದು ಇಂದಿರಾ ಕ್ಯಾಂಟೀನ್, ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಂದು ಅಡಿಗೆ ಮನೆಯನ್ನು ನಿರ್ಮಿಸಲು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷೆಯಲ್ಲಿ ಸಮಿತಿಯನ್ನು ರಚಿಸಿ, ಈ ಕೆಳಕಂಡ ಅಂಶಗಳ ಬಗ್ಗೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

1) ಮೆ॥ ಕೆ.ಇ.ಎಫ್. ಸಂಸ್ಥೆಯೊಂದಿಗೆ ದರ ಸಂಧಾನ ಮಾಡಿ, ಆರ್ಥಿಕ ವೆಚ್ಚವನ್ನು ಕಡಿಮೆ ಮಾಡಲು.
2) ಇಂದಿರಾ ಕ್ಯಾಂಟೀನ್ ಯೋಜನೆಗೆ ಲೋಗೋವನ್ನು ಅಂತಿಮಗೊಳಿಸಲು.
3) ಪ್ರತಿ ಕ್ಯಾಂಟೀನ್‌ನಲ್ಲಿ 2 ಶೌಚಾಲಯಗಳನ್ನು ನಿರ್ಮಿಸಲು.

..3.,

Scanned by CamScanner

4) ಕ್ಯಾಟರಿಂಗ್ ಸೇವೆಯನ್ನು ಒದಗಿಸುವ ಏಜೆನ್ಸಿಯನ್ನು ಆಯ್ಕೆ ಮಾಡುವ ಮಾಡಲು.

5) ಬಿ.ಡಿ.ಎ., ಬಿ.ಬಿ.ಎಂ.ಪಿ. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ, ಸದರಿ ಯೋಜನೆಗೆ ವಿದ್ಯುತ್‌ಚ್ಛಕ್ತಿ, ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮುಂಗಡ ಪಾವತಿ ಕಟ್ಟಿಸಿಕೊಳ್ಳದೆ ಒದಗಿಸಲು ಕ್ರಮ ವಹಿಸುವುದು.

ಮೇಲೆ (4)ರಲ್ಲಿ ಓದಲಾದ ಆದೇಶದಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯನ್ನು ಪ್ರಾರಂಭಿಸಲು ಪ್ರೀ ಕಾಸ್ಟ್ ವಿಧಾನದಲ್ಲಿ ಕ್ಯಾಂಟೀನ್ ಮತ್ತು ಅಡಿಗೆ ಕೋಣೆಗಳ ಕಟ್ಟಡಗಳನ್ನು ನಿಮಿಸಲು ಹಾಗೂ ನುರಿತ ಸಂಸ್ಥೆಯೊಂದಿಗೆ ದರ ಸಂಧಾನ ಮಾಡಿ, ಆರ್ಥಿಕ ವೆಚ್ಚವನ್ನು ಕಡಿಮೆ ಮಾಡಲು ಮತ್ತು ಯೋಜನೆಯ ಬಗ್ಗೆ ಕಾಲ ಕಾಲಕ್ಕೆ ಅಗತ್ಯ ತೀರ್ಮಾನ ತೆಗೆದುಕೊಳ್ಳಲು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ 'ಅಧಿಕಾರಯುಕ್ತ ಸಮಿತಿ' ಯನ್ನು ರಚಿಸಿ, ದಿನಾಂಕ 24-05-2017ರಂದು ಆದೇಶಿಸಲಾಗಿರುತ್ತದೆ. ಮೇಲೆ (5)ರಲ್ಲಿ ಓದಲಾದ ದಿನಾಂಕ 26-05-2017ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆಯ ಬಗ್ಗೆ ಅಧ್ಯಕ್ಷರು, ಕೆ.ಇ.ಎಫ್., ಇನ್ಫ್ರಾ, ವೀಠ್ಠಲ್ ಮಲ್ಯ ರಸ್ತೆ, ಬೆಂಗಳೂರು ಹಾಗೂ ಅಧಿಕಾರಿಗಳೊಡನೆ ಸಭೆಯನ್ನು ನಡೆಸಿ, ಸುದೀರ್ಘವಾಗಿ ಚರ್ಚಿಸಲಾಯಿತು ಹಾಗೂ ಮೆ॥ ಕೆ.ಇ.ಎಫ್., ಇನ್ಫ್ರಾ ಸಂಸ್ಥೆಯವರು 'ಪ್ರೀ ಕಾಸ್ಟ್' ಮಾದರಿಯಲ್ಲಿ ಕಟ್ಟಡಗಳನ್ನು ಕಟ್ಟಿರುವ ಬಗ್ಗೆ ಪ್ರಾತ್ಯಕ್ಷಿತೆ ನೀಡಿದರು. ಅಂತಿಮವಾಗಿ ಅಧ್ಯಕ್ಷರು ಸಲ್ಲಿಸಿರುವ ಪ್ರತಿ ಕ್ಯಾಂಟೀನ್‌ನ ಅಂದಾಜು ಮೊತ್ತವನ್ನು ಮತ್ತೊಮ್ಮೆ ಪರಿಶೀಲಿಸಿ, ಅತೀ ಕಡಿಮೆ ದರವನ್ನು ನಮೂದಿಸುವಂತೆ ಸಂಸ್ಥೆಯವರನ್ನು ಕೋರಲಾಯಿತು ಹಾಗೂ ಸದರಿ ಸಂಸ್ಥೆಗೆ ನುರಿತ ತಾಂತ್ರಿಕ ಅಧಿಕಾರಿಗಳನ್ನು ಕಳುಹಿಸಿ, ಈ ಕೆಳಕಂಡಂತೆ 3 ಅಂಶಗಳ ಕುರಿತು ತೀರ್ಮಾನ ತೆಗೆದುಕೊಳ್ಳಲಾಯಿತು.

1) ಕ್ಯಾಂಟೀನ್‌ಗೆ ಸದರಿ ಸಂಸ್ಥೆಯವರು ನೀಡಿರುವ ದರವು ಸರ್ಮಪಕವಾಗಿದೆಯೆ,

2) ಈ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗಿರುವ ಕನಿಷ್ಠ ಅವಧಿ (ಈ ಆಧಾರದ ಮೇರೆಗೆ ಟೆಂಡರ್ ಮೂಲಕ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ ಬಗ್ಗೆ ತೀರ್ಮಾನಿಸುವ ಅಗತ್ಯ ಮಾಹಿತಿ ಲಭ್ಯವಾಗುವುದು).

3) ಈ ಸಂಸ್ಥೆಯ ತಾಂತ್ರಿಕ ಸಾಮರ್ಥ್ಯ ಬಗ್ಗೆ ಹಾಗೂ ನಿಗಧಿತ ಸಮಯದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಾಧ್ಯತೆಯ ಬಗ್ಗೆ ಪರಿಶೀಲಿಸಿ, ಅವಶ್ಯಕತೆ ಇದ್ದಲ್ಲಿ, ಉಪಸಮಿತಿಯು ಈ ಸಂಸ್ಥೆಗೆ ಭೇಟಿ ನೀಡಿ, ಒಂದು ವರದಿಯನ್ನು ತಕ್ಷಣ ಸರ್ಕಾರಕ್ಕೆ ನೀಡುವಂತೆ ತಿಳಿಸುತ್ತಾ, ಪ್ರಧಾನ ಅಭಿಯಂತರರು, ಬಿ.ಬಿ.ಎಂ.ಪಿ. ಇವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಉಪ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.

ಮೇಲೆ (6)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 27-05-2017ರಂದು ಒಂದು ತಾಂತ್ರಿಕ ಸಮಿತಿಯನ್ನು ರಚಿಸಿ ಆದೇಶಿಸಲಾಯಿತು. ಅದರಂತೆ ಮೇಲೆ (7)ರಲ್ಲಿ ಓದಲಾದ ತಾಂತ್ರಿಕ ಸಮಿತಿಯು ಮೆ॥ ಕೆ.ಇ.ಎಫ್., ಇನ್ಫ್ರಾ ಸಂಸ್ಥೆಗೆ ಭೇಟಿ ನೀಡಿ, ಈ ಬಗ್ಗೆ ದಿನಾಂಕ 27-05-2017ರಂದು ಸಭೆಯನ್ನು ನಡೆಸಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

..4.,

Scanned by CamScanner

ಅದರಂತೆ ಸರ್ಕಾರವು ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಮಾನ್ಯ ಸಚಿವರ ಸಂಪುಟದ ಅನುಮೋದನೆ ಪಡೆದು, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ನಅಇ 319 ಎಂಎನ್‌ವೈ 2017,**

**ಬೆಂಗಳೂರು, ದಿನಾಂಕ: 12-06-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾಗೂ 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 198 ವಾರ್ಡ್‌ಗಳಲ್ಲಿ ತಲಾ ಒಂದರಂತೆ "ಇಂದಿರಾ ಕ್ಯಾಂಟೀನ್" ವಿನೂತನ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ನಿರ್ಮಾಣ ಕಾಮಗಾರಿಯನ್ನು ಮೆ॥ ಕೆ.ಇ.ಎಫ್. ಸಂಸ್ಥೆಯಿಂದ ಕೈಗೆತ್ತಿಕೊಳ್ಳಲು ಈ ಕೆಳಕಂಡಂತೆ ಅನುಮೋದನೆ ನೀಡಿ ಆದೇಶ ಹೊರಡಿಸಲಾಗಿದೆ.

(1) 2017-18ರ ಆಯವ್ಯಯದಲ್ಲಿ ಒದಗಿಸಿರುವ ರೂ.100.00 ಕೋಟಿ ಹಣವನ್ನು "ಇಂದಿರಾ ಕ್ಯಾಂಟೀನ್" ಅಡಿಗೆ ಮನೆ ಕಟ್ಟಡ ನಿರ್ಮಾಣ, ಅಡಿಗೆ ಮನೆ ಮತ್ತು ಕ್ಯಾಂಟೀನ್‌ಗಳ ಉಪಕರಣ ಮತ್ತು ಯಂತ್ರೋಪಕರಣಗಳೊಂದಿಗೆ ಪಿಠೋಪಕರಣಗಳು ಮತ್ತು ಇತರೇ ಸಲಕರಣೆಗಳಿಗೆ ಉಪಯೋಗಿಸಿಕೊಳ್ಳುವುದು.

(2) ಪ್ರತಿ ವಾರ್ಡ್‌ಗೆ ಒಂದರಂತೆ 198 ಇಂದಿರಾ ಕ್ಯಾಂಟೀನ್‌ಗಳನ್ನು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದು ಅಡಿಗೆ ಮನೆಯಂತೆ ಒಟ್ಟು 28 ಅಡಿಗೆ ಮನೆಗಳನ್ನು ನಿರ್ಮಿಸಲು ಮೆ॥ಕೆ.ಇ.ಎಫ್ ಇನ್‌ಫ್ರಾ, ಕೃಷ್ಣಗಿರಿ ರವರ ಸಂಧಾನಿತ ಮೊತ್ತ ರೂ.28.50 ಲಕ್ಷ (ತೆರಿಗೆ ಹೊರತುಪಡಿಸಿ)ಗಳಿಗೆ ಹಾಗೂ Pro-rota ಆಧಾರದಲ್ಲಿ 28 ಅಡಿಗೆ ಮನೆ ನಿರ್ಮಿಸುವುದು.

(3) ಇಂದಿರಾ ಕ್ಯಾಂಟೀನ್ ಮತ್ತು ಅಡಿಗೆ ಮನೆ ನಿರ್ಮಾಣ ಮತ್ತು ಯಂತ್ರೋಪಕರಣ, ಸಲಕರಣೆ ಮತ್ತು ಸಾಮಾಗ್ರಿಗಳನ್ನು ಖರೀದಿಸಲು ಕೆ.ಟಿ.ಪಿ.ಪಿ ಕಾಯ್ದೆ ಸೆಕ್ಷನ್ 4(ಜಿ) ಅನ್ವಯ ವಿನಾಯಿತಿ ನೀಡಲಾಗಿದೆ.

(4) 2017-18ನೇ ಸಾಲಿನ ಬಿ.ಬಿ.ಎಂ.ಪಿ.ಗೆ ನಗರೋತ್ಥಾನ ಯೋಜನೆಯಡಿಯಲ್ಲಿ ನೀಡಲಾಗಿರುವ ಅನುದಾನದಲ್ಲಿ ಈ ಯೋಜನೆಗಾಗಿ ತಗಲುವ ಹೆಚ್ಚುವರಿ ವೆಚ್ಚವನ್ನು ಭರಿಸಲು ಅನುಮೋದನೆ ನೀಡಿದೆ.

(5) ಮೂಲಭೂತ ಸೌಕರ್ಯ ಒದಗಿಸುವ ಸಂಸ್ಥೆಗಳಾದ ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗಳಿಗೆ ಸಂಬಂಧಿಸಿದಂತೆ ಕ್ಯಾಂಟೀನ್ ಮತ್ತು ಕಿಚನ್ ಕಟ್ಟಡಕ್ಕೆ ಉಪಯುಕ್ತ ಸೌಲಭ್ಯಗಳ ಸಂಪರ್ಕ ಪಡೆಯಲು ನೀಡಬೇಕಾಗಿರುವ ಪ್ರಾರಂಭಿಕ ಠೇವಣಿ ಮೊತ್ತವನ್ನು ಮನ್ನಾ ಮಾಡಲು ಅನುಮೋದನೆ.

(6) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸರ್ಕಾರಿ ಸಾಮ್ಯ ಸಂಸ್ಥೆಗಳಾದ ಬೆಸ್ಕಾಂ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬಿ.ಡಿ.ಎ, ಸ್ಲಂ ಬೋರ್ಡ್ ಮತ್ತು ಇತರೆ ಯಾವುದೇ ಸಂಸ್ಥೆಗಳಿಗೆ ಸಂಬಂಧಿಸಿದ ಸ್ವತ್ತುಗಳಲ್ಲಿ ಸೂಕ್ತವೆಂದು ಕಂಡಲ್ಲಿ 'ಇಂದಿರಾ ಕ್ಯಾಂಟೀನ್' ನಿರ್ಮಿಸಲು ಈ ಸ್ವತ್ತುಗಳ ಮಾಲೀಕತ್ವವನ್ನು ಮೂಲ ಸಂಸ್ಥೆಗಳ ಬಳಿಯಲ್ಲೇ ಉಳಿಸಿಕೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸ್ಥಳವನ್ನು ಹಸ್ತಾಂತರಿಸಲು ಅನುಮೋದನೆ.

(7) ಇಂದಿರಾ ಕ್ಯಾಂಟೀನ್ ಯೋಜನೆಯಡಿಯಲ್ಲಿ ಅಡಿಗೆ ಸೇವೆಯನ್ನು ಒದಗಿಸಲು ಮಹಿಳೆಯರಿಗೆ ಪ್ರಾಧ್ಯನ್ಯತೆ ನೀಡುವ ಸಂಬಂಧ ಒಟ್ಟು 28 ಸಂಖ್ಯೆಯಲ್ಲಿ ಶೇಕಡ 20% ರಷ್ಟು ಸಂಖ್ಯೆಯನ್ನು ಮಹಿಳಾ ಅಭ್ಯರ್ಥಿಗಳು ನಡೆಸುವ ಸ್ವ-ಸಹಾಯ ಸಂಘಕ್ಕೆ ಮೀಸಲಿರಿಸಲು ಅನುಮೋದನೆ.

..6..

Scanned by CamScanner

(8) ಈ ಯೋಜನೆಗೆ ತಗಲುವ ವೆಚ್ಚವನ್ನು 2017-18ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ವೆಚ್ಚ ಲೆಕ್ಕ ಶೀರ್ಷಿಕೆ '3604-00-191-1-51-051' ರಲ್ಲಿ ರೂ. 50.00 ಕೋಟಿ ಮತ್ತು ಲೆಕ್ಕ ಶೀರ್ಷಿಕೆ '3604-00-191-3-18' ರಲ್ಲಿ ರೂ. 50.00 ಕೋಟಿಗಳನ್ನು ಉಪಯೋಗಿಸಿಕೊಳ್ಳಲು ಅನುಮೋದಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯು ನೀಡಿರುವ ಸಹಮತಿ ಸಂಖ್ಯೆ: ಎಫ್‌ಡಿ 329 EXP-9/2017, ದಿನಾಂಕ 19-05-2017, ಎ.ಸಿ.ಎಸ್. ಎಫ್‌ಡಿ ಸಂಖ್ಯೆ: 2856, ದಿನಾಂಕ 03-06-2017 ಹಾಗೂ ಎ.ಸಿ.ಎಸ್. ಎಫ್‌ಡಿ ಸಂಖ್ಯೆ: 2896, ದಿನಾಂಕ 06-06-2017ರನ್ವಯ ಮತ್ತು ಸಚಿವ ಸಂಪುಟ ಸಭೆಯ ಸಂಖ್ಯೆ: 14, ಪ್ರಕರಣ ಸಂಖ್ಯೆ: ಸಿ. 384/2017, ದಿನಾಂಕ 07-06-2017ರನ್ವಯ ಹಾಗೂ ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಸಹಮತಿ ಸಂಖ್ಯೆ: ಯೋಇ/23/ಜಿಯೋವಿ/20, ದಿನಾಂಕ 22-05-2017ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎ. ಹಿದಾಯತ್ತುಲ್ಲ)
ಸರ್ಕಾರದ ಉಪ ಕಾರ್ಯದರ್ಶಿ-3,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
7. ಅಧ್ಯಕ್ಷರು, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕೊಳಚೆ ನಿರ್ಮೂಲನ ಮಂಡಳಿ, ಬೆಂಗಳೂರು.
9. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
11. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
13. ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
14. ಶ್ರೀ ಕೆ.ಇ. ಪೈಸಲ್, ಕೊಟ್ಟಿಕೊಲ್ಲೋನ್, ಅಧ್ಯಕ್ಷರು, ಮೆ॥ ಕೆ.ಇ.ಎಫ್., ಇನ್ಫ್ರಾ, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು.
15. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಬೆಂಗಳೂರು.
16. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
17. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
18. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ 3 ಮತ್ತು 9) ವಿಧಾನಸೌಧ, ಬೆಂಗಳೂರು.
19. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
20. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
21. ಅಧೀಕ್ಷಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
22. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Scanned by CamScanner